Doc-5
T-P-2

(1)

R No KANN 12

10 - 1 - 1975

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
- For Influential Publicity -

ಚುನಾವಣೆ ಸಿದ್ಧರಾಗಲು ಕಾಂಗ್ರೆಸಿಗರಿಗೆ ಕರೆ

ಗುರು ತೇಜ್ ಬಹದ್ದೂರ್

ಇತರರು ವೇದಧರ್ಮದ ನಿಜವಾದ ಮತ್ತು ನಿಷ್ಠ ಅನುಯಾಯಿಗಳಾಗಿದ್ದರು ; ಹಿಂದೂ ಮತಕ್ಕಾಗಿ ತಮ್ಮ ಜೀವನವನ್ನೇ ಬಲಿಕೊಟ್ಟರು. ಮತ್ತಾಂಧ ಮತ್ತು ಅನ್ಯ ಮತ ದ್ವೇಷಿ ಔರಂಗಜೇಬನು ಕಾಶ್ಮೀರದ ಎಲ್ಲಾ ಹಿಂದೂಗಳನ್ನೂ ಸಾಮೂಹಿಕ ಬೆದರಿಕೆ ಹಾಕಿ, ಮುಸ್ಲಿಂರಾಗಲು ಬಲಾತ್ಕರಿಸುತ್ತಿದ್ದನು

ಈ ಕ್ರೂರ ಕಗ್ಗೊಲೆ ಕಂಡ ಕೆಲವು ಪ್ರಮುಖ ವಿದ್ವಾಂಸರು ಗುರು ತೇಜ್ ಬಹದ್ದೂರರಲ್ಲಿಗೆ ಬಂದು, ಕಾಶ್ಮೀರಿ ಹಿಂದೂಗಳ ರಕ್ಷಣೆಗಾಗಿ ವಿನಂತಿಸಿದರು. ಆದಕ್ಕೆ ಗುರುವು " ಹಿಂದೂಗಳ ಕಷ್ಟ ಪರಿಹರಿಸಲು ಮತ್ತು ಮುಸ್ಲಿಂರ ಉಪದ್ರವ ಕೊನೆಗಾಣಿಸಲು ಒಬ್ಬ ಗಣ್ಯ ವ್ಯಕ್ತಿ ತನ್ನ ಜೀವನವನ್ನು ಬಲಿಕೊಡಲು ಬರುವ ಅವಶ್ಯಕತೆ ಇದೆ, ಎಂದು ಹೇಳಿದನು. ಆಗ ಕೇವಲ 11 ವರ್ಷದ ಬಾಲಕ ಗುರು ಗೋವಿಂದ ಸಿಂಗ್, ವಿದ್ವಾಂಸರು ತಿಳಿಸಿದ ಕ್ರೂರ ಕತೆ ಕೇಳಿ ಮನಸೊಂದು ಕ್ಷಣ ನಿರುಪಾದ್ಯನಾಗಿ, " ಪೂಜ್ಯ ತಂದೆಯವರೇ ! ನಿಮಗಿಂತ ಕೊಡಲ್ಯಾರಿರುವರು, ಹಿಂದೂಗಳನ್ನು ರಕ್ಷಿಸುವ ತ್ಯಾಗಕ್ಕೆ " ಎಂದು ಹೇಳಿದನು ಈ ವೀರವಾಣಿ ಕೇಳಿದ ಗುರು ತೇಜ್ ಬಹದ್ದೂರ್‌ರವರು, ಹಿಂದೂಗಳ ರಕ್ಷಣೆಯ ಪವಿತ್ರ ಕಾರ್ಯಕ್ಕೆ ತಮ್ಮ ಜೀವದ ಬಲಿಗೆ ನಿರ್ಧರಿಸಿದರು

ಇಲ್ಲಿ ಹೀಗಾದರೆ, ಅಲ್ಲಿ ಔರಂಗಜೇಬಿಗೆ ಅನೀಚ ರಾಂ ರಾಯ್ ಗುರುವಿನ ವಿರುದ್ಧ ದೂರಿತ್ತನು. ಗುರುವನ್ನು ಮುಗಿಸಿಬಿಡಬೇಕೆಂದಿದ್ದ ಔರಂಗಜೇಬನು ಕೂಡಲೇ ಕಾರ್ಯಕೈಗೊಂಡು ಗುರುವನ್ನು ಡೆಲ್ಲಿಗೆ ಕರೆಸಿದನು

ಹಿಂದೂಗಳನ್ನು ಮುಸ್ಲಿಂರನ್ನಾಗಿ ಜಾತ್ಯಂತರ ಗೊಳಿಸುವದರಲ್ಲಿ ಗುರುಗಳು ಅಡ್ಡಿಯಾಗಿದ್ದರು ಗುರುವನ್ನು ಮುಸ್ಲಿಂರಾಗಲು ಪದೇಪದೇ ಬಲಾತ್ಕರಿಸಲಾಗಿತ್ತು ; ಅವರು ತಿರಸ್ಕರಿಸಿದ್ದರಿಂದ, ಡೆಲ್ಲಿಯಲ್ಲಿ ಚಾಂದಿ ಚೌಕದಲ್ಲಿ ಭೀಕರ ಗುಂಪಿನೆದುರು ಗುರುವಿನ ತಲೆಯನ್ನು ಕತ್ತರಿಸಲಾಯಿತು. ಕೆಲ ಕಾಲಾನಂತರ ಗುರುವಿನ ಪವಿತ್ರ ಸ್ಮರಣೆಗಾಗಿ ಇಲ್ಲಿ ಡೆಲ್ಲಿಯ ಹಿಂದೂಗಳಿಂದ ಗುರುದ್ವಾರ ಸಿಸ್‌ಗಾಂಜ್ ನಿರ್ಮಿಸಲಾಯಿತು.

ಗುರು ತೇಜ್ ಬಹದ್ದೂರರನ್ನ ಜೈಲಿನಲ್ಲಿಡಲಾಗಿದ್ದಾಗ, ಒಬ್ಬ ಸೊಬ್ಬ ಮೊಗಲ್ ಜೈಲ್ ಅಧಿಕಾರಿಯು " ನೀನು ತ್ಯಜಿಸಲಾರದ ಮತ ಧರ್ಮ ಯಾವುದು " ಎಂದು ಕೇಳಿದನು

ಗುರುವು ಈ ರೀತಿ ಉತ್ತರಿಸಿದರು—

ಆಗಿಯಾ ಜೊ ಕರ್ತಾರ್ ದೀ ವೇದ್ ಚಾರ್ ಉಚ್ಚಾರಿ
ಧ್ರ್ಮ್ ತ ಕೊ ಖಾಸ್ ಹೆಂ ತಾಹಿ ಕರತ್ ಪ್ರಚಾರ್
ವೇದ್ ವಿರುದ್ಧ್ ಅಧರ್ಮ್ ಜೊ ಹಂ ನಹಿ ಕರತ್ ಪಸಂದ್
ವೇದೋಕ್ತ ಗುರೂ ಧರ್ಮ್ ಜೊ ತೀನ್ ಲೋಕ್ ಮೆ ಚಂದ್

' ದೇವರ ವಿಧಿಗಳೆಂದು ನಾಲ್ಕು ವೇದಗಳು ಘೋಷಿಸಿರುವ ಅ ಮತ ಧರ್ಮವನ್ನು ನಾನು ಬೋಧಿಸುತ್ತೇನೆ, ಅನುಸರಿಸುತ್ತೇನೆ ; ಅದೊಂದೇ ನಿಜವಾದ ಮತ. ಅಹರ ವಿರುದ್ಧವಾದುದು ಮತವಲ್ಲ ; ಅದು ಸುಳ್ಳು. ಮತ್ತು ನಾವು ಅದನ್ನು ಅಪೇಕ್ಷಿಸುವುದಿಲ್ಲ ; ವೈದಿಕ ಮತ ಒಂದೇ ದೇವರ ಮತ. ಚಂದ್ರನಂತೆ ಮೂರು ಲೋಕಗಳಲ್ಲೂ ಪ್ರಕಾಶಿಸುತ್ತದೆ '

ಇದನ್ನು ಓದಿದ ಮೇಲೆ ಈ ಗುರುಗಳು ನಿಜವಾದ ಹಿಂದೂ ಸಾಧುಗಳಲ್ಲವೆಂದು ಯಾರೂ ಹೇಳಲಾಗುವುದಿಲ್ಲ ; ಅವರೂ ಹಾಗೆಯೇ ಇತಿಹಾಸಕಾರರಿಂದ ಗೌರವ ಪಡೆಯಬೇಕು (ಟ್ರೂತ್‌ನಿಂದ ಅನುವಾದ)

ಗಫೂರ್ ಮಂತ್ರಿಮಂಡಲ

ಬಿಹಾರದ ಪರಿಸ್ಥಿತಿಯು ಕ್ಷುಲ್ಲಕ ವಿವಾದದಲ್ಲಿ ನನ್ನೆ ಮುಖ್ಯ ಮಂತ್ರಿ ಶ್ರೀ ಅಬ್ದುಲ್ ಗಫೂರ್ ಮತ್ತು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಚರ್ಚಿಸಿದರು. ಗಫೂರ್ ನಾಯಕತ್ವದ ಬದಲಾವಣೆಯನ್ನು ಕಾಂಗ್ರೆಸ್ ಹೈ ಕಮಾಂಡ್ ಅನೇಕ್ಷೆ ಮಾಡುವದಿಲ್ಲವೆಂದು ವರದಿಯಾಗಿದೆ

ಅಕ್ರಮ ಸಾಗಾಣಿಕೆಗಾರರ ಪ್ರಯತ್ನ

ಚಿಂಗಲೂರು ಜಿಲ್ಲೆಯ ಪೋಲೀಸರು ಗಡಿಯಲ್ಲಿ ತೀವ್ರ ಕಾವಲು ವ್ಯವಸ್ಥೆ ಮಾಡಿರುವ ಕಾರಣ, ಅಕ್ಕಿ ಮತ್ತು ಭತ್ತದ ಅಕ್ರಮ ಸಾಗಾಣಿಕೆಗಾರರು ಕಡಪ್ಪ ಮತ್ತದರ ಸುತ್ತಮುತ್ತ ಕಾರ್ಯಾಚರಣೆ ನಡೆಸಲು ಪ್ರಯತ್ನಿಸುತ್ತಿರುವರು.

ಭೂಮಿ ಒಪ್ಪಿಸಲು ಕರೆ

ಕಾಂಗ್ರೆಸಿಗರು ಸ್ವಂತ ಇಚ್ಛೆಯಿಂದ ತಮ್ಮಲ್ಲಿರುವ ಹೆಚ್ಚುವರಿ ಭೂಮಿ ಒಪ್ಪಿಸುವಂತೆ ಆಂಧ್ರ ಶಿಕ್ಷಣ ಮಂತ್ರಿ ಶ್ರೀ ಎಂ. ಎಸ್. ಕೃಷ್ಣರಾವ್ ವಿಜಯವಾಡದಲ್ಲಿ ತಿಳಿಸಿದರು

ಯುಗಾಸ್ಲಾವಿಯಕ್ಕೆ ಭೇಟಿ

ಈ ತಿಂಗಳು 19 ರಿಂದ 23 ರ ತನಕ ವಿದೇಶ ಮಂತ್ರಿ ಶ್ರೀ ವೈ ಬಿ ಚವಾಣರು ಯುಗಾಸ್ಲಾವಿಯಕ್ಕೆ ಭೇಟಿ ಕೊಡಲಿದ್ದಾರೆ. ಈ ಭೇಟಿಯಲ್ಲಿ ಅವರು ಯುಗಾಸ್ಲಾವಿಯದ ಅಧಿಕಾರಿಗಳೊಂದಿಗೆ ಅಂತರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸಲಿದ್ದಾರೆ.

ಬಾರಿ ಕುಸ್ಲಿ

ಗೋಧಿಯನ್ನೊಳಗೊಂಡು ಈ ಬಾರಿ ರಾಬಿ ಫಸಲು ಭಾರಿ ಕುಸ್ಲಿಯೆಂದು ನವ ದೆಹಲಿಯಲ್ಲಿ ಕೃಷಿ ಸಚಿವರಾದ ಶ್ರೀ ಎ ಪಿ ಶಿಂಧೆ ತಿಳಿಸಿದ್ದಾರೆ.

★ ರಾಜ್ಯಗಳ ಯೋಜನೆಯ ಕ್ರಮಪಟ್ಟಿಯಲ್ಲಿ ಕೇಂದ್ರದ ಸಹಾಯ ಹೆಚ್ಚಾಗಿ ದೊರೆಯುವದಿಲ್ಲವೆಂದು ನವ ದೆಹಲಿ ವಾರ್ತೆ.

ಫಟ್ಟನೆ ಚುನಾವಣೆ

ಫಟ್ಟನೆ ನಡೆಯುವ ಚುನಾವಣೆ ಫೆಬ್ರವರಿ–ಮಾರ್ಚಿ . ಏಪ್ರಿಲ್–ಮೇ ಮತ್ತು ಆಗಷ್ಟ್–ಡಿಸೆಂಬರ್‌ನಲ್ಲಿ ನಡೆಯಬಹುದೆಂದು ಖಾತರಿಪಡಿಸಿಕೊಳ್ಳಲು ಕೇಂದ್ರ ಮಂತ್ರಿ ಶ್ರೀ ಉಮಾಶಂಕರ್ ದೀಕ್ಷಿತ್ ನಾಗಾರ್ಜುನ ಸಾಗರದಲ್ಲಿ ತಿಳಿಸಿದರು. ಇದಕ್ಕೆ ಕಾಂಗ್ರೆಸಿಗರು ಸಿದ್ಧವಿರಬೇಕೆಂದು ಕರೆ ನೀಡಿದರು.

ಎಂಡಸಲ್ ಕಾರ್ಖಾನೆ

ಅಕ್ರಮ ಸಾಗಾಣಿಕೆಗಾರರ ಮೇಲೆ ಎಡಬಿಡದೆ ಕಾವಲು ಕಾರ್ಯಾಚರಣೆ ಕೈಗೊಳ್ಳುವುದಾಗಿ, ಕೇಂದ್ರ ಕಂದಾಯ ಸಹಾಯ ಮಂತ್ರಿ ಶ್ರೀ ಪಿ ಮುಖರ್ಜಿಯವರು ಬೆಂಗಳೂರಿನಲ್ಲಿ ತಿಳಿಸಿದರು.

ಸಿಹಿಯೊತ್ತಡ ಕಾಲ

ಸಿಹಿ ತಿಂಡಿಗಳ ಪದಾರ್ಥ ಗಾಂಡ ಇರುವ ಅಂಗಡಿಗಳನ್ನು ಬೆಂಗಳೂರಿನಲ್ಲಿ ಪೋಲೀಸರು ಶಕ್ತಿ ಮಾಡಿರುವರು.

ಭಾರತ ಇನ್ನು ಏಳೆಂಟು ವರ್ಷಗಳ ತನಕ ಕನಿಷ್ಠ 600 ಮಿಲಿಯ ಜನರಿಗೆ ಅನ್ನ ಒದಗಿಸಲಾರದೆಂದು ಕಾಕಿನಾಡದಲ್ಲಿ ಡಾಕ್ಟರೆಲ್ ಎನ್ ಸುಬ್ಬಾರಾವ್ ತಿಳಿಸಿದರು.

○ ಒಟ್ಟಿ ಅಕ್ರಮ ಸಾಗಾಣಿಕೆ ಸಂಬಂಧದಲ್ಲಿ ಇನ್ನೊಂದು ಮಂದಿಗೆ ಬಂಧನವಾಸ ವಿಧಿಸಿದೆ.

★ ಈಜಿಪ್ಟಿಗೆ ಬ್ರಿಟನ್ ಅಧಿಕೃತವಾಗಿ ಆಯುಧ ಒದಗಿಸಿದೆ

● ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಪೌನಾರ್‌ನಲ್ಲಿ ಆಚಾರ್ಯ ವಿನೋಬಾರನ್ನು ಸಂದರ್ಶಿಸುವರು

● ಅಮೇರಿಕ ದಂಡ ಪ್ರಯೋಗ ಮಾಡಿದರೆ ಎಣ್ಣೆ ಭೂಮಿಗಳನ್ನು ಸಿಡಿಸುವದಾಗಿ ಅರಬ ರಾಜ್ಯಗಳು ತಿಳಿಸಿವೆ

ಬಾಲು ಕಳೆದುಕೊಂಡ ಫರಿಯಂತೆ

ಶ್ರೀಮೇಷ್ಟ್ರು— ಕಾಂಗ್ರೆಸ್ಸು ಪಾರ್ಟಿ ಅಧ್ಯಕ್ಷ ಶ್ರೀ ಡಾಂಗೆಯವರು ಮಾರ ಶ್ವಿಸ್ಸು ಪಾರ್ಟಿಯನ್ನು ಕೇರಳದಲ್ಲಿನ ಅಡಳಿತ ಪಕ್ಷಕ್ಕೆ ಸೇರಿಸುವಂತೆ ಆಜ್ಞಾಪಿಸಿರುವದನ್ನು ಕಂಡಿತು, ಶ್ರೀಮತಿ ಎಂ. ಎಸ್. ನಂಬೂದರಿಪಾದರು, ಬಾಲು ಕಳೆದುಕೊಂಡ ಫರಿಯ ಚಮತ್ಕಾರವಿತ್ತು, ಎಂದೂ ಹೇಳಿಕಾಳಿಸಿರುವರು

*

ಅಪೂರ್ವ ಖ್ಯಾತ " ಸರಬಹಾರ್ " ಸಂಗೀತ ಉಪಕರಣ

ಮುದೇಕಾಸು— ಖ್ಯಾತ ಸಂಗೀತಗಾರ ವಿಲಾಯತ್ ಖಾನರ ಸೋದರ ಸೊಸೆ ಶ್ರೀಮತಿ ನಿಖೋಧೆರ್ ಖಾನರವರು ಸಂಗೀತ-ಅಕಾಡೆಮಿಯ ಮುಂದೆ ಅಪೂರ್ವ ಸಂಗೀತ ಉಪಕರಣ ' ಸರಬಹಾರ್ " ನ ಪ್ರದರ್ಶನ ನಡೆಸಿದರು – ಇದು ಅವರ ಮನೆಯಲ್ಲಿ ಮೂರು ಶತಮಾನಗಳಿಂದಿರುವಂತೆಯೂ ತಿಳಿಸಿದರು – ಇದನ್ನು ದೇಗುಲ ಜಾನಪದ ದಲ್ಲಿ ದೇವಾಲಯಗಳಲ್ಲಿ ದೇವರುಗಳನ್ನು ಎಬ್ಬಿಸಲು ಉಪಯೋಗಿಸಲಾಗುವುದೆಂದು ಹೇಳಿದರು.

*

ದಿವ್ಯವಾಣಿ

ಕ್ಷಮಾಪಣೆಯು ದೇವರ ಅತ್ಯಂತ ಪರಮಾವಶ್ಯಕತೆಯು ಮತ್ತು ಮಾನವನ ಅತ್ಯುನ್ನತ ದೈವಿಕ ಕಾರ್ಯ : ಕ್ಷಮಿಸಿ, ಕ್ಷಮಿಸು, ಕ್ಷಮಿಸು. – ಮಾತ್ಥೂ 5 : 7

SHAKTI
SUDHA

A Superb Tonic

Help The Gorakshana

—HumanitarianPropoganda Monthly—

Protect the Cow

Quality Printing Neat Binding

Lakshminarasimha Press

Sivarampet, Mysore 1

ವುಡ್‌ಲಾಂಡ್ಸ್ 10 1 75 ರಿಂದ

ಅಮೋಘ 5 ನೇ ವಾರ

ಚಟ್ಟಕ್ಕಾರಿ

ಅಪೂರ್ವ ಹುಸ್ಮಾನ್ ಕಲರ್ ಮಲಯಾಳಂ ಕಲಾಕೃತಿ

ಪಾತ್ರ — ಲಕ್ಷ್ಮೀ ಮೋಹನ್ ದಿನಕ್ಕೆ ಪ್ರದರ್ಶನಗಳು

ಅಪೆರಾ 8 1 75 ರಿಂದ

ಗನ್ ಫೈಟರ್ ಜಾನಿ

ಜೇಮ್ಸ್ ಬಾಂಡ್ ಕೃಷ್ಣ ಜ್ಯೋತಿಲಕ್ಷ್ಮಿ

ಅಭಿನಯಿಸಿರುವ

ಅಮೋಘ ಹಿಂದಿ ಚಿತ್ರ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ

Contribute Liberally

to the National Defence Fund

Edited Printed and Published by Dharmaprachaarasrata M S. Krishna Rao (Proprietor) at the Satyavadi Press, Chamarajapuram Mysore